2. **ಪಶು ಸಂಗೋಪನೆ** : ವಾರ್ಡ್ ವ್ಯಾಪ್ತಿಯಲ್ಲಿರುವ ಮಾಂಸದ ಅಂಗಡಿಗಳಿಂದ ಉತ್ಪತ್ತಿಯಾಗುವ ಮಾಂಸದ ತ್ಯಾಜ್ಯವನ್ನು ಯಾವ ರೀತಿ ವಿಲೇವಾರಿ ಮಾಡಲಾಗುತ್ತಿದೆ ಎಂಬ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀ. ಹನುಮಂತರಾಜು ಪಶುಪಾಲನ ಇಲಾಖೆ ರವರಿಗೆ ಮಾಹಿತಿ ನೀಡುವಂತೆ ಕೋರಲಾಗಿ ಶ್ರೀ. ಹನುಮಂತರಾಜು ರವರು ಸಮರ್ಪಕವಾದ ಉತ್ತರ ನೀಡದೆ ಇದ್ದಾಗ ಮುಂದನ ಸಭೆಯಲ್ಲಿ ಈ ಕುರಿತು ಸರ್ಪಕವಾದ ಉತ್ತರ ನೀಡುವಂತೆ ಹಾಗೂ ಸದರಿ ತ್ಯಾಜ್ಯವನ್ನು ಯಾರು ನಿರ್ವಹಿಸಬೇಕೆಂಬ ಬಗ್ಗೆ ಘನತ್ಯಾಜ್ಯ ವಿಭಾಗ ಮತು ಪಶು ಸಂಗೋಪನೆ ಇಲಾಖೆ ರವರು ಸಮನ್ವತೆಯೊಂದಿಗೆ ಪರಿಣಾಮಕಾರಿಯಾಗಿ ನಿರ್ವಹಿಸಲು ಸಭೆಯು ಸೂಚಿಸಿತು.

**ಕ್ರಮ** : ಪಶು ಸಂಗೋಪನೆ ಇಲಾಖೆ ಹಾಗೂ ಘನತ್ಯಾಜ್ಯ ವಿಭಾಗ

3. **ತೋಟಗಾರಿಕೆ ಇಲಾಖೆ** : ವಾರ್ಡ್ ವ್ಯಾಪ್ತಿಯಲ್ಲಿ ಬರುವ ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ಇಲಾಖೆಯು ಅನುಷ್ಠಾನಗೊಳಿಸಿರುವ ಹಾಗೂ ಅನುಷ್ಠಾನಗೊಳಿಸಬೇಕಾಗಿರುವ ಕಾರ್ಯಕ್ರಮಗಳನ್ನು ಕುರಿತು ಮುಂದಿನ ಸಭೆಗೆ ವಿವರವಾದ ಮಾಹಿತಿಯನ್ನು ನೀಡುವಂತೆ ನೋಡಲ್ ಅಧಿಕಾರಿಯವರು ಸೂಚಿಸಿರುತ್ತಾರೆ.

**ಕ್ರಮ** : ತೋಟಗಾರಿಕೆ ಇಲಾಖೆ

ಸಭೆಗೆ ಗೈರು ಹಾಜರಾಗಿರುವ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ತೀವ್ರ ಅಸಮದಾನ ವ್ಯಕ್ತಪಡಿಸಿದ್ದು, ಮುಂದಿನ ಸಭೆಗೆ ಸಾರ್ವಜನಿಕ ಹಿತದೃಷ್ಟಿಯಿಂದ ತಪ್ಪದೆ ಹಾಜರಾಗುವಂತೆ ಸಭೆಯು ತೀರ್ಮಾನಿಸಿರುತ್ತದೆ. ಗೈರು ಅಧಿಕಾರಿಗಳಿಗೆ ಸಂಬಂಧಿಸಿದಂತೆ ಅವರ ಇಲಾಖೆಗಳ ಮೇಲಾಧಿಕಾರಿಗಳಿಗೆ ವರದಿ ಮಾಡಲಾಗುವುದೆಂದು ನೊಡಲ್ ಅಧಿಕಾರಿಯವರು ಸೂಚಿಸಿರುತ್ತಾರೆ.

ಅಂತಿಮವಾಗಿ ನೋಡಲ್ ಅಧಿಕಾರಿಯವರು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳನ್ನು ಹಾಲಿಸಿ ಸ್ಪಂದಿಸಿ ಪರಿಹರಿಸಲು ಕ್ರಮತೆಗೆದುಕೊಂಡು ಸಂಬಂಧಪಟ್ಟ ಇಲಾಖೆಗಳು ಸಮನ್ವತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿರುತ್ತಾರೆ.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ನೋಡಲ್ ಅಧಿಕಾರಿರವರ ಆದೇಶದ ಮೇರೆಗೆ**

ಕಾರ್ಯದರ್ಶಿ

ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ

| | | | | |
|---|---|---|---|---|
| 17 | | ಸದಸ್ಯರು | ಪೊಲೀಸ್ ಇನ್ಸ್‌ಪೆಕ್ಟರ್ ಕಾನೂನು ಮತ್ತು ಸುವ್ಯವಸ್ಥೆ ಚಂದ್ರಾ ಲೇಔಟ್ | ಗೈರು ಹಾಜರಾಗಿರುತ್ತಾರೆ |
| 18 | | ಸದಸ್ಯರು | ಪೊಲೀಸ್ ಇನ್ಸ್‌ಪೆಕ್ಟರ್ ಸಂಚಾರಿ ಪೊಲೀಸ್ ಠಾಣೆ, 9ನೇ ಮುಖ್ಯರಸ್ತೆ, ಹಂಪಿನಗರ, ಬೆಂಗಳೂರು | ಗೈರು ಹಾಜರಾಗಿರುತ್ತಾರೆ |
| 19 | | ಸದಸ್ಯರು | ಆರೋಗ್ಯ ವೈಧ್ಯಾಧಿಕಾರಿಗಳು | ಗೈರು ಹಾಜರಾಗಿರುತ್ತಾರೆ |
| 20 | | ಸದಸ್ಯರು | ಕಂದಾಯ ಇಲಾಖೆ | ಗೈರು ಹಾಜರಾಗಿರುತ್ತಾರೆ |

ವಾರ್ಡ್ ಕಮಿಟಿ ಸಭೆಯನ್ನು ನಡೆಸುವ ಕುರಿತಾಗಿ ದಿನಾಂಕ:-31-07-2021 ರಂದು ಸಭೆಯ ಸೂಚನಾ ಪತ್ರವನ್ನು ವಾರ್ಡ್ ಸಂಖ್ಯೆ : 132ಕ್ಕೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಗೆ ಕಳುಹಿಸಿಕೊಡಲಾಗಿರುತ್ತದೆ ಹಾಗೂ ವಾರ್ಡ್ ಸಂಖ್ಯೆ : 132 ವಾಟ್ಸ್ ಆಫ್ ಗ್ರೂಪ್‌ಗೆ ಸದರಿ ಸಭೆಯ ಸೂಚನಾ ಪತ್ರವನ್ನು ಹಾಕಲಾಗಿರುತ್ತದೆ.

ಸಭೆಯ ಪ್ರಾರಂಭಿಕ ಹಂತದಲ್ಲಿ ವಾರ್ಡ್ ಕಾರ್ಯದರ್ಶಿ ರವರು ಸಭೆಗೆ ಹಾಜರಿದ್ದ ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರನ್ನು ಸ್ವಾಗತಿಸಿದರು.

<u>ಸಭೆಯಲ್ಲಿ ಸಾರ್ವಜನಿಕ ದೂರುಗಳಿಗೆ ಸಂಬಂಧಿಸಿದಂತೆ ಚರ್ಚಿಸಲಾಯಿತು.</u>

1. **ಕೋವಿಡ್-19** : ಕೋವಿಡ್-19 ಸಾಂಕ್ರಮಿಕ ರೋಗಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ಹಾಜರಿದ್ದ ಶ್ರೀ. ಮಾರುತಿ ಸೇಟ್ ಹಿರಿಯ ಆರೋಗ್ಯ ಪರಿವೀಕ್ಷಕರು ವಿವರವಾದ ಮಾಹಿತಿಯನ್ನು ನೀಡುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಪರೀಕ್ಷೆಯನ್ನು ನಡೆಸುತ್ತಿದ್ದು ಪ್ರತಿದಿನ 100 ಜನಕ್ಕೆ ಲಸಿಕೆಯನ್ನು ನೀಡಲಾಗುತ್ತಿದೆ ಎಂದು ಸಭೆಯಲ್ಲಿ ಮಾಹಿತಿಯನ್ನು ನೀಡಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಸದಸ್ಯರು ಮತ್ತು ಸಾರ್ವಜನಿಕರು ಎಲ್ಲಾ ಸಾರ್ವಜನಿಕರಿಗೆ ಸಮರ್ಪಕವಾಗಿ ಲಸಿಕೆ ನೀಡುವಂತೆ ಕೋರಿದ್ದು, ಅದರಂತೆ ಸಾರ್ವಜನಿಕರಿಗೆ ಸಮರ್ಪಕವಾದ ಕೋವಿಡ್-19 ಪರೀಕ್ಷೆ ಹಾಗೂ ಲಸಿಕೆಯನ್ನು ನೀಡುವಂತೆ ನೋಡೆಲ್ ಅಧಿಕಾರಿರವರು ಸಂಬಂಧಪಟ್ಟ ಇಲಾಖೆಗೆ ಸೂಚಿಸಿರುತ್ತಾರೆ.

**ಕ್ರಮ** : ಆರೋಗ್ಯ ಇಲಾಖೆ

**<u>ಘನತ್ಯಾಜ್ಯ ನಿರ್ವಹಣೆ</u>** : ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷರವರು ಘನತ್ಯಾಜ್ಯ ನಿರ್ವಹಣೆ ಬಗ್ಗೆ ಸಭೆಗೆ ಮಾಹಿತಿಯನ್ನು ನೀಡಿರುತ್ತಾರೆ. ವಾರ್ಡ್‌ನಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡಲು ಸೂಚಿಸಲಾಯಿತು. ಮನೆ ಮನೆಗಳಿಂದ ಕಸ ಸಂಗ್ರಾಹಣೆ ಮಾಡಲು ಒಟ್ಟು ನಿಯೋಜಿಸಲಾಗಿರುವ ಪೌರಕಾರ್ಮಿಕರ ಸಂಖ್ಯೆಯನ್ನು ಹಾಗೂ ಕಾರ್ಯನಿರ್ವಹಿಸುವ ಆಟೋ ಟಿಪ್ಪರ್‌ಗಳ ಸಂಖ್ಯೆಗಳನ್ನು ಕಾಲಕಾಲಕ್ಕೆ ವಾರ್ಡ್ ಮಟ್ಟದ ವಾಟ್ಸ್ ಆಫ್ ಗ್ರೂಪ್‌ಗೆ ಹಾಕಲು ಸಭೆಯಲ್ಲಿ ತೀರ್ಮಾನಿಸಲಾಯಿತು ಹಾಗೂ ಸಮರ್ಪಕವಾಗಿ ತ್ಯಾಜ್ಯ ನಿರ್ವಹಣೆ ಮಾಡಲು ಸಂಬಂಧಪಟ್ಟ ಇಲಾಖೆಯವರಿಗೆ ಸೂಚಿಸಲಾಯಿತು.

**ಕ್ರಮ** : ಘನತ್ಯಾಜ್ಯ ನಿರ್ವಹಣೆ ಇಲಾಖೆ

## ದಿನಾಂಕ:–07–08–2021 (ಶನಿವಾರ) ರಂದು ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ ವಾರ್ಡ್ ಸಮಿತಿ ಸಭೆ ನಡವಳಿಗಳು

*********

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ ವಾರ್ಡ್ ಸಮಿತಿ ಸಭೆಯು ದಿನಾಂಕ:– 07–08–2021 ಶನಿವಾರ 10.30 ಗಂಟೆಗೆ ನೋಡೆಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನ ಉಪ ವಿಭಾಗದ ಕಛೇರಿಯಲ್ಲಿ ನಡೆದಿರುತ್ತದೆ.

**<u>ಸಭೆಗೆ ಹಾಜರಾಗಿ ಭಾಗವಹಿಸಿದ ಸದಸ್ಯರು ಮತ್ತು ಸಾರ್ವಜನಿಕರ ವಿವರ</u>**

| ಕ್ರ.ಸಂ | ಅಧಿಕಾರಿಗಳು ಮತ್ತು ಸದಸ್ಯರ ಹೆಸರು | ಪದನಾಮ | ಇಲಾಖೆ | ಹಾಜರಾತಿ |
|---|---|---|---|---|
| 1 | ಶ್ರೀ. ರಾಧಕೃಷ್ಣ | ನೋಡಲ್ ಅಧಿಕಾರಿ | ಕಾರ್ಯಪಾಲಕ ಅಭಿಯಂತರರು ಚಾಮರಾಜಪೇಟೆ ವಿಭಾಗ | ಹಾಜರಾಗಿರುತ್ತಾರೆ |
| 2 | ಶ್ರೀ. ಕೆ.ಎಸ್. ಸ್ವಾಮಿ | ಕಾರ್ಯದರ್ಶಿ | ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ | ಹಾಜರಾಗಿರುತ್ತಾರೆ |
| 3 | ಶ್ರೀ. ಮಾರುತಿ ಸೇಟ್ | ಸದಸ್ಯರು | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ | ಹಾಜರಾಗಿರುತ್ತಾರೆ |
| 4 | ಶ್ರೀ. ಎನ್.ಟಿ. ಲಕ್ಷ್ಮೀನರಸಿಂಹಯ್ಯ | ಸದಸ್ಯರು | ತೋಟಗಾರಿಕೆ ಇಲಾಖೆ | ಹಾಜರಾಗಿರುತ್ತಾರೆ |
| 5 | ಶ್ರೀ. ಹನುಮಂತರಾಜು | ಸದಸ್ಯರು | ಪಶು ಸಂಗೋಪನೆ | ಹಾಜರಾಗಿರುತ್ತಾರೆ |
| 6 | ಶ್ರೀ. ಜಿ.ಸಿ. ಬಾಲರಾಜ್ | ಸದಸ್ಯರು | ಕೆಲಸ ಪರಿವೀಕ್ಷಕರು (ಪ್ರಭಾರ) ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ | ಹಾಜರಾಗಿರುತ್ತಾರೆ |
| 7 | ಶ್ರೀಮತಿ. ಸವೀತಾ | ಸದಸ್ಯರು | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ಸಂಖ್ಯೆ : 132 ಅತ್ತಿಗುಪ್ಪೆ | ಹಾಜರಾಗಿರುತ್ತಾರೆ |
| 8 | ಶ್ರೀ. ಶಿವಕುಮಾರ್ | ಸದಸ್ಯರು | ಬೀದಿ ದೀಪದ ಗುತ್ತಿಗೆದಾರರು | ಹಾಜರಾಗಿರುತ್ತಾರೆ |
| 9 | ಶ್ರೀ. ಸಿ.ಹೆಚ್. ಪೈ | ಸದಸ್ಯರು | ಸಾರ್ವಜನಿಕ ವಿಭಾಗ | ಹಾಜರಾಗಿರುತ್ತಾರೆ |
| 10 | ಶ್ರೀ. ಎಸ್. ಸೋಮಣ್ಣ | ಸದಸ್ಯರು | ಸಾರ್ವಜನಿಕ ವಿಭಾಗ | ಹಾಜರಾಗಿರುತ್ತಾರೆ |
| 11 | ಶ್ರೀ. ಹೊನ್ನೇಗೌಡ | ಸದಸ್ಯರು | ಸಾರ್ವಜನಿಕ ವಿಭಾಗ | ಹಾಜರಾಗಿರುತ್ತಾರೆ |
| 12 | ಶ್ರೀಮಿತಿ. ವೀಣಾ ಅರವಿಂದ್ | ಸದಸ್ಯರು | ಸಾರ್ವಜನಿಕ ವಿಭಾಗ | ಹಾಜರಾಗಿರುತ್ತಾರೆ |
| 13 | | ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂಎಸ್ಎಸ್‌ಬಿ | ಗೈರು ಹಾಜರಾಗಿರುತ್ತಾರೆ |
| 14 | | ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ | ಗೈರು ಹಾಜರಾಗಿರುತ್ತಾರೆ |
| 15 | | ಸದಸ್ಯರು | ವಲಯ ಅರಣ್ಯಾಧಿಕಾರಿ | ಗೈರು ಹಾಜರಾಗಿರುತ್ತಾರೆ |
| 16 | | ಸದಸ್ಯರು | ಕಲ್ಯಾಣಾಧಿಕಾರಿ ದಕ್ಷಿಣ ವಲಯ | ಗೈರು ಹಾಜರಾಗಿರುತ್ತಾರೆ |